ಓ ಎಸ್ ನಂ.248/2018
ಡಿಡಬ್ಲ್ಯೂ: 1

ದಿನಾಂಕಃ 10-11-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ ವಾದಿಗಳ ಪರ ವಕೀಲರಿಂದಃ

ಪ್ರತಿವಾದಿ 2 ನನ್ನ ಹೆಂಡತಿ ಎಂದರೆ ಸರಿ. ವಾದಿಗಳು ಮತ್ತು ಪ್ರತಿವಾದಿ 3 ಮತ್ತು 4 ನನ್ನ ಮಕ್ಕಳು ಎಂದರೆ ಸರಿ. ಮಲ್ಲಪ್ಪ ಮೃತಪಟ್ಟಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯಿಂದ ಬಂದ ಆಸ್ತಿಗಳು ಎಂದರೆ ಸರಿ. ಸರ್ವೆ ನಂ.61/2 ರ ಆಸ್ತಿಯನ್ನು ನಾನು ನನ್ನ ಸ್ವಂತ ಹಣದಿಂದ ಖರೀದಿ ಮಾಡಿದ್ದೇನೆ ಎಂದರೆ ಸರಿ. ಸರ್ವೆ ನಂ.61/2 ರಲ್ಲಿ 4 ಎಕರೆ 21 ಗುಂಟೆ ಯನ್ನು 1999 ರಲ್ಲಿ ರೂ.1,14,000 ಕ್ಕೆ ಖರೀದಿ ಮಾಡಿದ್ದೇನೆ. ಅದರಲ್ಲಿ ಉಳಿದ ಜಮೀನನ್ನು ಲಕ್ಷ್ಮಣ್ ವಾಳದ್ ಮತ್ತು ಬಾಳವ್ವ ವಾಳದ್ ಖರೀದಿ ಮಾಡಿದ್ದಾರೆ. ಖರೀದಿ ಮಾಡಿದ ನಂತರ ಜಮೀನನ್ನು 2003 ರಲ್ಲಿ ನನ್ನ ಗಂಡು ಮಕ್ಕಳು ಮತ್ತು ಹೆಂಡತಿಗೆ ಖಾತೆ ಮಾಡಿಸಿರುತ್ತೇನೆ. 25 ವರ್ಷಗಳಿಂದ ನಾನು ಉಪ್ಪಾರಟ್ಟಿಯ ಪಿ ಕೆ ಪಿ ಎಸ್ ಕಾರ್ಯದರ್ಶಿ ಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಮತ್ತು ನನ್ನ ಅಣ್ಣತಮ್ಮಂದಿರು ವಿಭಾಗವಾಗಿರುತ್ತೇವೆ. ಅವರು ನನ್ನನ್ನು ಹೊಡೆಯಲು ಪ್ರಾರಂಭಿಸಿದರು ಹಾಗಾಗಿ ವಿಭಾಗ ಮಾಡಿಕೊಂಡಿದ್ದೇವೆ. ಅವರು ಮಂಟೂರು ರಾಮಣ್ಣನ್ನು ಕೊಲೆ ಮಾಡಿದ್ದರು ಹಾಗಾಗಿ ಅವರ ಸಹವಾಸ ಬೇಡವೆಂದು ನಾನು ಬೇರೆಯಾಗಿದ್ದೆ. ಜಮೀನು ಖರೀದಿ ಮಾಡಲು ನಾನು ಹಣವನ್ನು ಕೈಸಾಲ ಮಾಡಿ ಕೊಟ್ಟಿದ್ದೇನೆ. ಯಮನಪ್ಪಾ ಚೂನನ್ನವರ, ಬಸಲಿಂಗಪ್ಪಾ ಚಿಗದನ್ನವರ ಮತ್ತು ಶೇಶಪ್ಪಾನಾಯಕ್ ರವರ ಕಡೆಯಿಂದ ಕೈಸಾಲಗಳನ್ನು ಪಡೆದುಕೊಂಡಿದ್ದೇನೆ.

2. ಏನು ವ್ಯವಹಾರ ಆಯಿತು ಎಂದರೆ ಸಾಕ್ಷಿ ಪಿ ಎಲ್ ಡಿ ಬ್ಯಾಂಕ್ ನಲ್ಲಿ ರಾವಾಚಂದ್ರಪ್ಪನ ಸಾಲವಿತ್ತು, ಅದನ್ನು ತೀರಿಸಲು ಜಮೀನನ್ನು ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ಸರ್ವೆ ನಂ.61/2 ರ ಜಮೀನು ನನ್ನ ಸ್ವಂತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನನ್ನ ಉಳಿದ ಅಣ್ಣತಮ್ಮಂದಿರಿಗೆ ಭಾಗ ಇರುವುದಿಲ್ಲ. ಹಿಂದೆ ಆಗಿರುವ ಓ ಎಸ್ ನಂ.177/2011 ನ್ನು ದಾಖಲು ಮಾಡಿದಾಗ ವಾದಿಗಳು

ಮತ್ತು ಪ್ರತಿವಾದಿ 12 ರಿಂದ 14 ಇದ್ದ ಬಗ್ಗೆ 5 ರಿಂದ 11 ನೇ ಪ್ರತಿವಾದಿಗಳಿಗೆ ಗೊತ್ತಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ಜಮೀನುಗಳಲ್ಲಿ ನನಗೆ ಭಾಗ ಕೊಟ್ಟಿರುವುದಿಲ್ಲ. ಆ ದಾವೆಯಲ್ಲಿ ಡಿಕ್ರಿ ಹೇಗೆ ಮಾಡಿಕೊಂಡರು ನನಗೆ ಗೊತ್ತಿಲ್ಲ. ನನ್ನನ್ನು ಕಡೆಯುತ್ತೇನೆಂದು ನನ್ನ ಬಳಿ ಸಹಿ ತೆಗೆದುಕೊಂಡರು.

<u>ಪಾಟೀಸವಾಲು:</u> 7 ರಿಂದ 12 ಮತ್ತು 14 ನೇ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ